

ಬೆಟ್ಟದ ಶಿಖರಕ್ಕೆ ಕರೆದೊಯ್ದು ಕೊನೆಯ ಬೃಹತ್ ಬಂಡೆ ಅತ್ಯಂತ ಕಡಿದಾಗಿದೆ. ಇತ್ತೀಚಿನ ದಿನಗಳಲ್ಲಿ ಅಲ್ಲಿ ಹೊಸದಾಗಿ ಮೆಟ್ಟಿಲುಗಳನ್ನು ಕಡೆದಿದ್ದಾರೆ, ತಡೆಕಂಬಿಗಳನ್ನು ನೆಟ್ಟಿದ್ದಾರೆ

ಅವರ ಹೆಸರುಗಳಿದ್ದ ಶಾಸನ ಇದ್ದಿತೆಂದು ಅವರು ತಿಳಿಸಿದರು. ನೆಲಕ್ಕೆ ಟೈಲ್ ಹಾಸಿದ ಸಮಯದಲ್ಲಿ ಆ ಶಾಸನ ಅಡಿಯಲ್ಲಿ ಕಣ್ಮರೆಯಾಗಿತ್ತು. 'ನಾಲ್ವಡಿ ಕೆಂಪೇಗೌಡರ' ಉಲ್ಲೇಖವನ್ನು ನಾನು ಆರ್ಕೈವ್ ದಾಖಲೆಗಳಲ್ಲಿ ಇನ್ನೂ ಕಂಡಿಲ್ಲ.

ಜುಲೈ 1923ರ 'ದಿ ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ'ಯಲ್ಲಿ ಪ್ರಕಟಿಸಿರುವ ಬಿ. ಪುಟ್ಟಯ್ಯ ಅವರ 'ದಿ ಕೆಂಪೇಗೌಡ ಚೀಫ್ಸ್' ಎಂಬ ಲೇಖನ 'ಬೆಂಗಳೂರು ಮಹಮದೀಯರ ವಶಕ್ಕೆ 1638ರಲ್ಲಿ ಬಂದಾಗ, ಇಮ್ಮಡಿ ಕೆಂಪೇಗೌಡರು ಮಾಗಡಿಗೆ ಹೋಗಿ ನೆಲೆಸಿದ್ದನ್ನು, ನಂತರ ಅವರು ಹುಲಿಕಲ್, ಹುಲಿಯೂರು ದುರ್ಗ, ಹುತ್ರಿದುರ್ಗ, ಬೈರನದುರ್ಗಗಳನ್ನು ಗೆದ್ದು ತಮ್ಮ ವಶಕ್ಕೆ ಪಡೆದುದನ್ನು' ತಿಳಿಸುತ್ತದೆ. ಇಮ್ಮಡಿ ಕೆಂಪೇಗೌಡರ ಮಗನಾದ ಮುಮ್ಮಡಿ ಕೆಂಪೇಗೌಡರು 1705ರಿಂದ 1728ರವರೆಗೂ ಆಳಿದ್ದರು. '1728ರಲ್ಲಿ ಮೈಸೂರು ಒಡೆಯರ್ ವಶಕ್ಕೆ ಅವರ ರಾಜ್ಯ ಬಂದು, ಮುಮ್ಮಡಿ ಕೆಂಪೇಗೌಡರು ಶ್ರೀರಂಗಪಟ್ಟಣದಲ್ಲಿ ಕೊನೆವರೆಗೂ ಬಂದಿಯಾಗಿ ಉಳಿದರು' ಎಂದೂ ಈ ಲೇಖನ ತಿಳಿಸಿತ್ತು. ಇವರ ಮುಂದುವರೆದ ವಂಶದಲ್ಲಿ ನಾಲ್ವಡಿ ಕೆಂಪೇಗೌಡ ಎಂಬಾತ ಇದ್ದಿರಬಹುದು. ಆದರೆ ಈ ಶಾಸನದ ಬಗ್ಗೆ ಎಪಿಗ್ರಾಫಿಯಾದಲ್ಲಿ ಉಲ್ಲೇಖವಿಲ್ಲ. ಇಲ್ಲಿ ಕಂಬದ ಕೆಳಭಾಗದಲ್ಲಿ ಹುಗಿದುಹೋಗಿರುವ ಶಾಸನವನ್ನು ಪುರಾತತ್ವ ವಿಭಾಗ ಅಗೆದು ಹೊರತೆಗೆದರೆ ಪುರಾವೆ ಸಿಗಬಹುದು. ಇಲ್ಲಿ ಮತ್ತೊಂದು ಕಂಬದ ಮೇಲೆ ಆಗಿನ ಹುತ್ರಿದುರ್ಗದ ಪಾಳೆಗಾರನ ಕೆತ್ತನೆ ಇದೆ. ತಲೆಗೆ ಶಿರಸ್ತ್ರಾಣ ತೊಟ್ಟ ಆತನ ಕೆತ್ತನೆಯ ಪಕ್ಕದಲ್ಲಿ ಚಿಕ್ಕದಾಗಿ ಪತ್ನಿಯ ಕೆತ್ತನೆ ಇದೆ.

ಎಪಿಗ್ರಾಫಿಯಾ 'ಆದಿನಾರಾಯಣಸ್ವಾಮಿ ದೇವಸ್ಥಾನದ ಉತ್ಸವ ವಿಗ್ರಹದ ಪೀಠದ ಮೇಲೆ ಇರುವ' ಶಾಸನವನ್ನು ಉಲ್ಲೇಖಿಸಿತ್ತು. ಅರ್ಚಕರನ್ನು ಕೇಳಿದಾಗ, ಅವರು ಹಿತ್ತಾಳೆಯ ಉತ್ಸವ ಮೂರ್ತಿಯ ಪೀಠವನ್ನು ತೋರಿಸಿದರು. ಅಲ್ಲಿ 'ಹುತರ್‍ರಿದುರ್ಗದ ಕಂದಾಚ್ಯಾರದ ದೇವರು' ಎಂಬ ಕೆತ್ತನೆ ಇತ್ತು. ಇಲ್ಲಿಯ ಕಂದಾಯ ಅಧಿಕಾರಿ ನೀಡಿದ ಕೊಡುಗೆ ಈ ಉತ್ಸವ ಮೂರ್ತಿ ಎಂದು ಎಪಿಗ್ರಾಫಿಯಾ ತಿಳಿಸುತ್ತದೆ.

ಆರ್ಕಿಯಾಲೊಜಿಕಲ್ ರಿಪೋರ್ಟ್ ಇಲ್ಲಿಯ ಒಂದು ಕಂಬದ ಮೇಲೆ 'ಮತ್ಸ್ಯ ಹನುಮ'ನ ಅಪರೂಪದ ಕೆತ್ತನೆಯನ್ನೂ ಉಲ್ಲೇಖಿಸಿತ್ತು. ಅದು ಹಿಂದಿನ ಕಂಬದ ಮೇಲಿತ್ತು. ಹನುಮಂತ ಲಂಕೆಯನ್ನು ಸುಟ್ಟು ಹಿಂತಿರುಗಿ ಹಾರುವಾಗ, ಆತನ ದೇಹದಿಂದ ಸಮುದ್ರಕ್ಕೆ ಬಿದ್ದ ಬೆವರ ಹನಿಯೊಂದು ಮತ್ಸ್ಯದಲ್ಲಿ ಜೀವ ತಳೆದು, 'ಮತ್ಸ್ಯ ಹನುಮ' ಹುಟ್ಟಿದನೆಂಬ ಪುರಾಣ ಕತೆಯಿದೆ. ಇಲ್ಲಿ ಕಂಬಗಳ ಮೇಲೆ ಎರಡು ಕಡೆ ಜಿಂಕೆಯ ಕೊಂಬುಗಳೊಡನೆ ಹುಟ್ಟಿದ ಋಷ್ಯಶೃಂಗನ ಕೆತ್ತನೆ ಇದೆ.

ಗುಡಿಯಿಂದ ಹೊರಬಂದಾಗ, ಅದೇ ಹಾದಿ ನೇರವಾಗಿ ಹುತ್ರಿದುರ್ಗದ ಬೆಟ್ಟದತ್ತ ಸಾಗಿತ್ತು. ಬಾಗಿದ ಒಂದು ಬೃಹತ್ ವೃಕ್ಷವನ್ನು ದಾಟುತ್ತಿದ್ದಂತೆ, ಹುತ್ರಿದುರ್ಗದ ಬೆಟ್ಟ ಹರಡಿ ಮಲಗಿರುವ ದೈತ್ಯನಂತೆ ಕಂಡಿತು. ಬೃಹತ್ ಬಂಡೆಗಳ ಬೆಟ್ಟವನ್ನು ಸುತ್ತಿ ಏರಿದ ಕಲ್ಲಿನ ಕೋಟೆಯ ಗೋಡೆ, ನಡುನಡುವಿನ ಕಾವಲು ಬುರುಜುಗಳ ಭವ್ಯ ದೃಶ್ಯ ಕಣ್ಣರಳಿಸಿತು.

ವಿಸ್ತಾರವಾದ ಬಂಡೆಯ ಮೇಲೆ ಏರುತ್ತಾ ಬಂದಾಗ, ಬೆಟ್ಟದ ಮೇಲಿನ ಕೋಟೆಯ ಮೊದಲ ದ್ವಾರ ಕಾಣಿಸಿತು. ಅಡ್ಡತೊಲೆಯ ಮೇಲೆ, ಅಸ್ಥಿರವಾಗಿ ಕಲ್ಲುಗಳ ಗುಡ್ಡೆ. ಮತ್ತೆ ಕೊಂಚ ಹತ್ತುತ್ತಿದ್ದಂತೆ ದೊಡ್ಡ ಬಂಡೆಗಳ ಬದಿಯಲ್ಲಿ ನಿಂತ ಕೋಟೆಯ ಎರಡನೇ ಬಾಗಿಲು ಬಂದಿತು. ಇಲ್ಲಿಂದ ದಟ್ಟಪೊದೆ ಗಿಡಗಳ ನಡುವೆ, ಕುಸಿದ ಕಲ್ಲುಗಳ ಮೇಲೆ ಎಚ್ಚರಿಕೆಯ ಹೆಜ್ಜೆ ಇಟ್ಟು ಏರಿ ಬಂದೆ, ಈಗ ಎದುರಿಗೆ ಹರಡಿದ ಬೃಹತ್ ಬಂಡೆಯ ಮೇಲೆ ಸವೆದು ಹೋದ ಪುರಾತನ ಮೆಟ್ಟಿಲುಗಳು ಕಂಡವು. ಬಂಡೆಯನ್ನು ಏರಿ ಒಮ್ಮೆ ಹಿಂತಿರುಗಿ ನೋಡಿದೆ, ಸುತ್ತಲಿನ ಪರಿಸರದ ವಿಹಂಗಮ ನೋಟ ಮೋಹಕವಿತ್ತು. ಎದುರಲ್ಲಿ ಬಸವಣ್ಣನ ಬೆಟ್ಟ, ಎರಡು ಬೆಟ್ಟಗಳ ನಡುವೆ ಮಲಗಿದ ಹುತ್ರಿಹಳ್ಳಿ.

ಈಗ ಒಂದಿಷ್ಟು ಮರಪೊದರುಗಳ ನಡುವಿನ ಅಡ್ಡಾದಿಡ್ಡಿ ಕಲ್ಲುಗಳ ಮೇಲೆ ಹೆಜ್ಜೆ ಹಾಕಿ, ದೊಡ್ಡ ಬಂಡೆಯ ಬದಿಯಲ್ಲಿ ನಿಂತ ಮೂರನೇ ಕೋಟೆದ್ವಾರಕ್ಕೆ ಬಂದೆ. ಈ ದ್ವಾರದ ಅಡ್ಡತೊಲೆಯ ಮೇಲೆ ಮೂರು ಮೀನುಗಳನ್ನು ಕೆತ್ತಲಾಗಿತ್ತು. ಮತ್ತೆ ಕುಸಿದು ಹೋಗಿದ್ದ ಹಳೆಯ ಮೆಟ್ಟಿಲುಗಳನ್ನು ಏರಿ, ಎರಡು ಹೆಬ್ಬಂಡೆಗಳ ನಡುವೆ ಹುದುಗಿದ್ದ ನಾಲ್ಕನೇ ದ್ವಾರಕ್ಕೆ ಬಂದೆ. ಈ ಕೋಟೆ ಬಾಗಿಲ ಅಡ್ಡತೊಲೆಯ ಮೇಲೆ ನಾಲ್ಕು ಮೀನುಗಳನ್ನು ಕೆತ್ತಿದ್ದರು.

ಕಿರಿದಾದ ಜಾಡು ದಟ್ಟ ಕಾಡಿನ ಮೂಲಕ, ಕುಸಿದ ಕಲ್ಲುಗಳ ಮೇಲೆ ಒಂದಿಷ್ಟು ಏರಿಳಿಸಿ ಐದನೇ ಕೋಟೆ ಬಾಗಿಲಿಗೆ ಕರೆತಂದಿತ್ತು. ನಡುವೆ ಆಂಜನೇಯ ಸ್ವಾಮಿಯ ಕೆತ್ತನೆಯೊಂದನ್ನು ಕಂಡಿದ್ದೆ. ಐದನೇ ಬಾಗಿಲು ದಾಟಿ ಬಂದಾಗ ಎತ್ತರೆತ್ತರಕ್ಕೆ ಏರಿನಿಂತ ವಿಸ್ತಾರದ ಬಂಡೆ. ಬೆಟ್ಟದ ಶಿಖರಕ್ಕೆ ಕರೆದೊಯ್ದು ಕೊನೆಯ ಈ ಬೃಹತ್ ಬಂಡೆ ಅತ್ಯಂತ ಕಡಿದಾಗಿತ್ತು. ಇಲ್ಲಿ ಸವೆದು ಹೋದ ಕಿರಿದಗಲದ ಪುರಾತನ ಮೆಟ್ಟಿಲು ನಡುನಡುವೆ ಇದ್ದರೂ, ಈ ಏರುವಿಕೆ ಅಪಾಯದ್ದೇ; ಬಲು ಜಾಗರೂಕತೆಯಿಂದ ಹತ್ತಿದೆ. ಈ ದುರ್ಗದಿಂದ ತಪ್ಪಿಸಿಕೊಂಡು ಬದುಕುಳಿದ ಬ್ರಿಟಿಷ್ ಯುದ್ಧ ಕೈದಿ ಜೇಮ್ಸ್ ಬ್ರಿಸ್ಟನ್ ಬಣ್ಣಿಸಿದ ಕಡಿದಾದ ಬಂಡೆ ಇದೇ ಇರಬೇಕು. ಹತ್ತಿ ಬಂದಾಗ ನನ್ನೆದುರು ಕಡೆಯ ಕೋಟೆಯ ದ್ವಾರವಿತ್ತು. ಅದರ ಎರಡೂ ಕಡೆಗೆ ಚಾಚಿದ್ದ ಕೋಟೆಯ ಗೋಡೆ ಈ ಶಿಖರದ ಕಲ್ಲುಬಂಡೆಯನ್ನು ಸುತ್ತುವರೆದಿತ್ತು.